ಸಮಾರಂಭ ನಡೆಸುವವರು ತಮ್ಮುನ ಮನೆಗೆ ಮೊದಲೇ ಹೋಗಿ ಇಂಥ ದಿನ ನಮ್ಮಲ್ಲಿ ನಡೆಯುವ ಶುಭಕಾರ್ಯಕ್ಕೆ ಪರಿವಾರ ಸಮೇತ ಬಂದು ಮಂಗಳಕಾರ್ಯ ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಕೇಳಿ, ವೀಳ್ಯ ನೀಡುವುದು ವಾಡಿಕೆ. ಶುಭಸಮಾರಂಭಗಳಿಗೆ ವಾಲಗ (ಮೌರಿ) ಹಿಡಿದು, ಶ್ರುತಿ ಸುಬ್ಬ, ಸಮ್ಮೇಳ(ಸಂಬಾಳ)ದ ಸಂಕ್ರು–ಪರಿವಾರದೊಡನೆ ಚಿತ್ತೈಸುತ್ತಿದ್ದ ವಾದ್ಯದ ತಮ್ಮುವಿನ ವೇಷಭೂಷಣ, ಹಾವಭಾವ, ಗತ್ತು, ದೌಲತ್ತೇ ಬೇರೆ!

ಜರಿಮಿಶ್ರಿತ ಕೆಂಪುಹಸಿರು ಅಂಚಿನ ಬಿಳಿಪಂಚೆ. ಉದ್ದಕೈತೋಳಿನ ಬಿಳಿ ಶರ್ಟ್. ಹೆಗಲ ಮೇಲೂ ಬಿಳಿ ಟವಲ್. ಕುತ್ತಿಗೆಯಲ್ಲಿ ಫಳಫಳಗುಟ್ಟುವ ಚಿನ್ನದ ಒಂದೆಳೆ ಚೈನ್. ವಾದ್ಯ ನುಡಿಸುವಾಗ ಬಲ–ಎಡಗೈ ಬೆರಳಲ್ಲಿ ಎದ್ದು ಕಾಣುವ ಬಿಳಿಕೆಂಪಿನ ಹರಳ ಬೆಳ್ಳಿಯುಂಗುರಗಳು. ಹುಬ್ಬಿನ ನಡುವೆ ಎದ್ದು ಕಾಣುವ ಹೆಬ್ಬೆರಳ ಅಗಲದ ಕುಂಕುಮ, ಹರಳೆಣ್ಣೆ ತೀಡಿ, ನಡುಬೈತಲೆ ತೆಗೆದು ಆಕಡೆ, ಈಕಡೆ, ಹಿಂಗಡೆ ನೀಟಾಗಿ ಇಳಿಸಿ ಬಾಚಿ ಗಪ್ಪಾಗಿಸಿದ ಗುಂಗುರು ಕೂದಲು. ಜುಟ್ಟಿಗೆ ಮಲ್ಲಿಗೆ ಸರ. ಸಮಾರಂಭ ಮುಗಿದ ಮೇಲೆ ಫಲತಾಂಬೂಲ ಪೇರಿಸಿದ ಹರಿವಾಣದಲ್ಲಿ ವೀಳ್ಯದೆಲೆ ಪಟ್ಟಿಯೊಂದಿಗೆ ಆಡಿದ ಮಾತಿನಂತೆ ಗೌರವ ಧನವಿಟ್ಟು, ಜೊತೆಗೆ ಪಂಚೆ ಟವಲ್ ಉಡುಗೊರೆ ನೀಡುವುದು ಸಂಪ್ರದಾಯ. ಆ ಸನ್ನಿವೇಶದಲ್ಲಿ ತಮ್ಮುವಿಗೆ ದೊರೆಯುತ್ತಿದ್ದದ್ದು ನಿಜಕ್ಕೂ ರಾಜ ಮರ್ಯಾದೆ!

ಇದಕ್ಕೂ ಅಪವಾದವಿರಲಿಲ್ಲವೆಂದಲ್ಲ!

